had asked him this question. The answer was completely irrelevant. Such words are insinuating and are derogatory to the felling of the people on this side. These things ought to have been checked by you in time. That is my submission.

Mr. SPEAKER.—The Hon'ble Member should remember that so far as questions are concerned, I have got control and can check whether they are relevant or irrelevant. So far as answers are concerned, I have no such control. What is the rule ? Can I say that the answer given is wrong ? The person who has put the question takes the answer for what it is worth. If it is irrelevant or wrong, can I say "I know personally that the answer is wrong ? Therefore you give a proper answer". I cannot compel the Minister. Anyway, we shall discuss this matter later on. Kindly let the Member meet me and I will talk to him.

Sri V. S. PATIL.—This is an important matter which raises big issues concerning the privilege of this House. Government cannot give false answers or answers which are capricious and escape with it.

Mr. SPEAKER.—We will take it up later.

Messages from the Legislative Council—Announced.

Mr. SPEAKER.—I report to the House that a message has been received from the Legislative Council that the Mysore Police Bill 1963, passed by the Legislative Assembly during the course of this session and transmitted to the Legislative Conucil, has been passed by the Legislative Council, on 25th September 1963, without any amendment.

I report to the House that a message has been received from the Legislative Council that the Mysore Official Languages Bill, 1963, passed by the Legislative Assembly during course of this session and trasmitted to the Legislative Council, has been passed by the Legislative Council on 25th September 1963 without any amendment.

Next item is Laying of Papers.

Members Representations.

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಇಪತ್ತಿನ ದಿವಸ ಆಗಿರತಕ್ಕಂಥ ವಿಷಯ ನಮ್ಮ ಮನಸ್ಸಿಗೆ ಬಹಳ ತೊಂದರೆ ಉಂಟು ಮಾಡಿದೆ. ಮಾನ್ಯ ಗೃಹ ಮಂತ್ರಿಯವರು ಮಾಡಿದಂಥ ಹೇಳಿಕೆಯಲ್ಲಿ ಯಾರೋ ಕೆಲವರು ಜನ ಬೆಂಬಲವಿಲ್ಲದೆ ಫೂಟಿಂಗ್ ಅರೇಂಜ್ ಮಾಡಿದ್ದರು, ಪೋಲಿಸಿನವರ ಸಂಖ್ಯೆಯೇ ಜಾಸ್ತಿ ಇತ್ತು ಎಂದು ಹೇಳಿ ಜನತೆಗೆ ಅವಮಾನಕರವಾಗತಕ್ಕಂಥ, ಅವಹೇಳನಕರವಾದಂಥ, ಹೇಳಿಕೆಯನ್ನು ಸೆಭೆಯ ಮುಂದಿಟ್ಟಿದ್ದಾರೆ. ಅದು ಬಹಳ ಗಂಭೀರವಾದ ಜವಾಬ್ದಾರಿ. ನಾವು ಅದನ್ನು ಪ್ರತಿಭಟಿಸಲೇಬೇಕಾಗಿದೆ. ಯಾವ ಆಧಾರದ ಮೇಲೆ ಸರಕಾರ ಜನತೆಯನ್ನು ಕೊಶ್ಯನ್ ಮಾಡುತ್ತದೆ ? ಅವರು ಸಿ.ಐ.ಡಿ. ಇಂಟಲಿಜನ್ಸ್ ಮೇಲೆ ಜನತೆಯ ಬೆಂಬಲವನ್ನು ಅಳತೆ ಮಾಡುತ್ತಿದ್ದಾರೆಯೋ ? ಯಾರೋ ಹೇಳಿಬಿಟ್ಟರು 100 ಜನ ಕೂಡ ಬಂದಿರಲಲ್ಲವೆಂದು ಅಂದರೆ. ಇವರಿ ಜನತೆಯನ್ನು ಅಳತೆ ಮಾಡತಕ್ಕ ಶಕ್ತಿ ಇದೆಯೇ ಎಂದು ಕೇಳಬೇಕು. ಇದು ಅವರ ಅಶಕ್ತತೆಯನ

(ಶ್ರೀ ಎಸ್. ಶಿವಪ್ಪ)

ಪ್ರದರ್ಶನ ಮಾಡುತ್ತದೆ. ತಮ್ಮ ಅಶಕ್ತತೆಯನ್ನು ತೋರಿಸಿಕೊಳ್ಳುವುದಕ್ಕೆ ಜನತೆಯ ಮೇಲೆ ಅವಹೇಳನಕರವಾದ ಹೇಳಿಕೆಯನ್ನು ಕೊಡುವುದು ಅವಮಾನಕರ. ಒಂದು ಉದಾಹರಣೆ ಕೊಡುತ್ತೇನೆ. ಮೊನ್ನೆ ನಾಟಕ ಮಸೂದೆ ಬಂದಾಗ, ಅದನ್ನು ಪ್ರತಿಭಟಿಸಲು ಒಂದು ಪ್ರೊಸೆಷನ್ ಬರುತ್ತದೆಂದು ಹೇಳಿ ಇಡೀ ಬೆಂಗಳೂರಿನಲ್ಲಿ ಸಾವಿರಾರು ಜನ ಪೋಲೀಸರನ್ನು ಹಾಕಿದ್ದರು. ನಾನು ಅವತ್ತೇ ಊರಿನಿಂದ ಇಲ್ಲಿಗೆ ಬಂದೆ; ಏಕೆ ಇಷ್ಟೊಂದು ಪೋಲೀಸು ಜನರನ್ನು ಹಾಕಿದ್ದಾರೆಂದು ಕೇಳಿದಾಗ, ದೊಡ್ಡ ಪ್ರೊಸೆಶನ್ ಬರುತ್ತದೆ ಎಂದು ಪೋಲೀಸಿನವರನ್ನು ಹಾಕಿದ್ದಾರೆಂದು ಹೇಳಿ ಬಿಟ್ಟರೂ ಕೆಲಸವಿಲ್ಲದ ಪೋಲೀಸಿನವರನ್ನು ಊರಿನೆಲ್ಲಾ ಹಾಕಿದ್ದರು. ಇದು ತಮ್ಮ ಇಂಟೆಲಿಜನ್ಸ್ ಎಷ್ಟರ ಮಟ್ಟಿಗೆ ಇದೆಯೆಂದು ತೋರಿಸುತ್ತದೆ. ತಮ್ಮ ಇಂಟೆಲಿಜನ್ಸ್ ಡಿಪಾರ್ಟ್‌ಮೆಂಟು ಸರಿಯಾದ ಮಾರ್ಗದರ್ಶನವನ್ನು ಕೊಡಲಿಕ್ಕೆ ಶಕ್ತ ಇಲ್ಲದಿರುವಾಗ, ಜನಗಳ ಬೆಂಬಲ ಸಿಕ್ಕಲಿಲ್ಲವೆಂದು ಹೇಳಿ ಮೀಸೆ ಮೇಲೆ ಕೈ ಇಟ್ಟುಕೊಳ್ಳತಕ್ಕಂಥಾದ್ದು ಇಡೀ ದೇಶಕ್ಕೆ ಬಹಳ ಅವಮಾನಕರ. ಜನತೆಗಳು ಅಷ್ಟು ಹೇಡಿಗಳಲ್ಲ. ಜನತೆ ಪೋಲೀಸಿಗೆ ಹೆದರತಕ್ಕಂಥಾದ್ದಲ್ಲ. ಬೇಕಾದರೆ 10-20 ಸಾವಿರ ಜನರನ್ನು ತರುತ್ತೇವೆಂದು ಅವರಿಗೆ ಸವಾಲು ಹಾಕುತ್ತೇನೆ. ಜನತೆ ನುಮ್ಮನಿರುವುದಿಲ್ಲ. ಅವರು ಹೇಳಿರುವುದು ಅವಹೇಳನಕರವಾಗಿದೆ. ಆದ್ದರಿಂದ ಅವರು ದೊಡ್ಡ ಮನಸ್ಸು ಮಾಡಿ, ದೊಡ್ಡತನದಿಂದ, ಕ್ಷಮೆಯನ್ನು ಕೇಳಬೇಕೆಂದು ವೈಯಕ್ತಿಕವಾಗಿ ನಾನು ಅವರಲ್ಲಿ ಪ್ರಾರ್ಥನೆ ಮಾಡುತ್ತೇನೆ

Mr. SPEAKER.—What is it the Hon'ble Member is saying? If he wants to make a statement he can ask for time.

† Sri V. S. PATIL.—Sir, I want to represent another point. Today's list of questions contains only 4 questions, out of which one has not been put. May I know as to whether we, the Members of the House, are negligent in sending questions or your office is negligent in forwarding the questions to Government or Government is negligent in giving answers? I would like to know on the floor of the House as to how many questions are pending with your office and with the Government and on what dates. According to Rule 40, the Government shall send the reply to the questions for oral answers within 15 days. I want to know in how many cases this rule has been complied with or whether it is complied with only in its breach. A clarification and information is sought from you, Sir.

† ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಈ ಪ್ರಶ್ನೆಗಳನ್ನು ಕೊಡುವುದರಲ್ಲಿ 40ನೆಯ ರೂಲ್ ಏನು ಹೇಳುತ್ತದೆ? ನಾನು ನಭೆಯ ಗಮನಕ್ಕೆ ತರುವುದಕ್ಕಾಗಿ ಅದನ್ನು ಓದುತ್ತೇನೆ.

> "The Government shall send a reply to a question for oral answer within fifteen days from the date of its receipt by the Government."

ಇದರಲ್ಲಿ ಅನುಮಾನ ಬಂದಿದೆ.

> "Provided that the date of receipt for the purpose of this rule shall be the date on which the orders of the Speaker in regard to the admissibility of the question have been received by the Government".

ತಾವು ಈ ಆರ್ಡರ್ ಕೊಟ್ಟಿಲ್ಲ ಎಂದು ನನಗೆ ಅನುಮಾನ ಬರುತ್ತದೆ. 1962ನೆಯ ಇಸವಿಯಲ್ಲಿ ನಾನು ಸದನ್ಯನಾದ ಮೇಲೆ ಕಲವು ಪ್ರಶ್ನೆಗಳನ್ನು ಕಳುಹಿಸಿದ್ದೆ. ಅದಕ್ಕೆ ಇಲಾಖೆಯಿಂದ ಕೊಟ್ಟಿರುವ ಉತ್ತರಗಳ ಸಮೇತ ನನಗೆ ಒಂದು ಪತ್ರವನ್ನು ಬರೆದಿದ್ದಾರೆ. ಅದನ್ನು ಓದುತ್ತೇನೆ.

> "Sub: Starred questions tabled by you for 1962-63 Sessions of the Legislative Assembly—and replies thereto.

With reference to your letter dated 31st August 1963, on the above subject, I am directed to state that out of the 18 questions tabled by you, 10 starred and 8 unstarred, during the 1962 Session, replies to 12 questions were received after the adjournment of the Session and as such they could not be taken up in the House."

ಈ ಪ್ರಶ್ನೆಗಳನ್ನು ಯಾವಾಗ ಕಳಿಸಿದ್ದು, ಯಾವಾಗ ಸೆಷನ್ ಅಡ್ಜರ್ನ್ ಆಯಿತು ಎಂಬುದು ಬಹಳ ಮುಖ್ಯವಾದ ಪ್ರಶ್ನೆ. ಜನ ಏನು ತಿಳಿಯುತ್ತಾರೆಂದರೆ ಗೋಪಾಲಗೌಡರು ಅಸೆಂಬ್ಲಿಗೆ ಹೋಗುವುದೇ ಇಲ್ಲ, ಯಾವ ಒಂದು ಪ್ರಶ್ನೆಯನ್ನೂ ಕಳಿಸಿಲ್ಲ ಎಂದು. ಇಷ್ಟು ಪ್ರಶ್ನೆಗಳಿಗೆ ಉತ್ತರ ಕೊಡಲು ಸರ್ಕಾರಕ್ಕೆ ಏಕೆ ಕಷ್ಟವಾಯಿತು? ಹಾಗಾದರೆ ಅವರಿಗೆ ಡೈರೆಕ್ಷನ್ ಕೊಟ್ಟಿಲ್ಲ ಅಥವಾ ಸರ್ಕಾರದವರು ತಮ್ಮ ಡೈರೆಕ್ಷನ್ನನ್ನು ಉಲ್ಲಂಘಿಸಿದ್ದಕ್ಕೆ ಕಾರಣವನ್ನು ಕೊಟ್ಟಿಲ್ಲ ಅಥವಾ ಸರ್ಕಾರ ಕೆಲಸ ಮಾಡುತ್ತ ಇಲ್ಲ ಎಂದು ನಾವು ತಿಳಿದುಕೊಳ್ಳಬೇಕಾಗುತ್ತದೆ. ಇದನ್ನ ನಾನು ಅನೇಕ ಸಲ ತಮ್ಮ ಗಮನಕ್ಕೆ ತರಬೇಕೆಂದಿದ್ದೆ. ಇವೊತ್ತು ಬಹಳ ಕಳಕಳಿಯಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಈ ಪ್ರಶ್ನೆಗಳನ್ನು ಆಯ್ಕೆಮಾಡಿ ಉತ್ತರ ಕೊಡಲು ಕಳಿಸುತ್ತೀರಿ. ಆ ಉತ್ತರಗಳು ಯಾವ ದೃಷ್ಟಿಯಿಂದಲೂ ಸಮಂಜಸವಾಗಿವೆ, ಸರಿಯಾಗಿವೆ ಎಂದು ಹೇಳುವಹಾಗೆ ಇಲ್ಲ. ಇದನ್ನು ದಯವಿಟ್ಟು ತಾವು ಸರಿಪಡಿಸಬೇಕು. ಈಗ ಆಗಿರತಕ್ಕ ಲೋಪಕ್ಕೆ ಏನು ಪರಿಹಾರ ಕೊಡುತ್ತೀರಿ ಎಂಬುದನ್ನು ತಿಳಿಸಬೇಕು ಎಂದು ಕೇಳುತ್ತೇನೆ ಸ್ವಾಮಿ. ಈ ಪ್ರಶ್ನೆಗಳು ಪ್ರೊಸೀಡಿಂಗ್ಸ್‌ನಲ್ಲಿ ಹೋಗುವುದಿಲ್ಲ. ನನಗೆ ಪ್ರತ್ಯೇಕವಾಗಿ, ಏನೋ ಉಪಚಾರಕ್ಕೆ, ಅಳಿಯನಿಗೆ ಕೊಡುಗೆ ಕೊಡುವ ಹಾಗೆ ಕೊಟ್ಟಿದ್ದಾರೆ. 18 ಸಾವಿರ ಜನ ನನ್ನನ್ನು ಆರಿಸಿಕಳಿಸಿದ್ದಾರೆ. ನನಗೆ ತಮ್ಮಷ್ಟೇ ರಾಜ್ಯದ ಹಿತಾಸಕ್ತಿ ಇದೆ. ಇದು ನನ್ನ ವೈಯಕ್ತಿಕ ವಿಷಯವಲ್ಲ. ಅದುದರಿಂದ ಇದನ್ನು ಪರಿಶೀಲನೆ ಮಾಡುವುದಕ್ಕೆ ತಾವು ಒಂದು ಸಮಿತಿ ನೇಮಕ ಮಾಡಿ ಏಕೆ ಹೀಗಾಯಿತು, ಎಂದು ಸಮಂಜಸವಾದ ಮತ್ತು ತೃಪ್ತಿಕರವಾದ ಉತ್ತರ ಕೊಟ್ಟರೆ ಮಾತ್ರ ನನಗೆ ಸಮಾಧಾನವಾಗುತ್ತದೆ ಇಲ್ಲದಿದ್ದರೆ ನನ್ನದೇ ಆದ ತೀರ್ಮಾನಕ್ಕೆ ನಾನು ಬರಬೇಕಾಗುತ್ತದೆ.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಶಿರಾ).—ಸ್ವಾಮಿ, ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ಇವರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ? ಹಿಂದೆ ಇದೇ ಸಭೆಯಲ್ಲಿ 30 ಪ್ರಶ್ನೆಗಳಿಗೆ ಉತ್ತರ ಬರುತ್ತಿತ್ತು. ಕೆಲವು ವೇಳೆ ಪ್ರಶ್ನೆಗಳಲ್ಲದೆ ಪ್ರಶ್ನೋತ್ತರಗಳ ಕಾಲವನ್ನು ತೆಗೆದು ಹಾಕಿದಾಗ ಈ ಸಭೆಯಲ್ಲಿ ಪ್ರೊಚೆಸ್ಟ್ ಮಾಡುತ್ತಿದ್ದರು. ತಮ್ಮ ಕಾಲದಲ್ಲಿ 8 ರಿಂದ 12ಕ್ಕೆ ಇಳಿದು ಹೋಯಿತು. ಅದಕ್ಕೆ ಶ್ರೀ ಗೋಪಾಲ ಗೌಡರ ಜೊತೆಯಲ್ಲಿ ಮತ್ತು ವಿ. ಎಸ್. ಪಾಟೀಲರ ಜೊತೆಯಲ್ಲಿ ಧ್ವನಿಗೂಡಿಸುತ್ತೇನೆ. ಹಿಂದಿನ ಅಧಿವೇಶನಗಳಲ್ಲಿ ಹೀಗಾಗಿರಲಿಲ್ಲ. ಇದನ್ನು ಸರಿಪಡಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ: ಲಕ್ಷಾಂತರ ರೂಪಾಯಿಗಳ ದುರುಪಯೋಗವಾಗಿದೆ ಎನ್ನುವ ಸಂಬಂಧದಲ್ಲಿ ಒಂದು ಪ್ರಶ್ನೆಯನ್ನು ಕಳಿಸಿದ್ದೆ. ಅದಕ್ಕೆ ಇನ್ನೂ ಉತ್ತರ ಬಂದಿಲ್ಲ ಎಂದು ತಮ್ಮ ಹತ್ತಿರ ಅರಿಕೆ ಮಾಡಿಕೊಳುತ್ತೇನೆ. ತಾವು ಸರ್ಕಾರಕ್ಕೆ ಸರಿಯಾದ ರೀತಿಯಲ್ಲಿ ತಿಳಿಸಿ ತಮ್ಮ ಅಧಿಕಾರವನ್ನು ಉಪಯೋಗಿಸಬೇಕು. ಸರ್ಕಾರದವರು ಕಾಲಾವಕಾಶ ಕೇಳಿದರೆ ಒಂದು ತಿಂಗಳು ಬೇಕಾದರೂ ಕೊಡಿ ಎಂದು ಹೇಳುತ್ತೇನೆ. ಸದಸ್ಯರು ಕಳಿಸಿರುವ ಪ್ರಶ್ನೆಗಳ ವಿಷಯದಲ್ಲಿ ಏನೇನು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎನ್ನುವುದು ನಮಗೆ ಗೊತ್ತಾಗದ ಹೋದರೆ ಹೇಗೆ? ಹಿಂದೆ 30 ಪ್ರಶ್ನೆಗಳು ಬರುತ್ತಿದ್ದುದು ತಮ್ಮ ಕಾಲದಲ್ಲಿ ಏಂಟಕ್ಕೆ ಇಳಿದು ಹೋಯಿತಲ್ಲ ಎಂದು ವ್ಯಸನವಾಗುತ್ತದೆ. ಸರ್ಕಾರ ತಮಗೆ ಅಪ್ರತ್ಯಕ್ಷವಾಗಿ ಅವಮಾನ ಮಾಡುತ್ತಿದೆಯೋ ಏನೋ ಎನ್ನುವ ಭಾವನೆ ನನಗೆ ಬಂದಿದೆ. ಈ ಥಿನ ನೋಡಿದರೆ ನಾಲ್ಕು ಪ್ರಶ್ನೆಗಳು ಮಾತ್ರ ಬಂದಿವೆ; ಹಿಂದೆ 30 ಪ್ರಶ್ನೆಗಳು ಬರುತ್ತಿದ್ದು ತಮ್ಮ ಕಾಲದಲ್ಲಿ ಏಕೆ ಹೀಗಾಯಿತು? ಇದಕ್ಕೆ ಏನಾದರೂ ವಿಷಧಿಯನ್ನು ಕಂಡುಹಿಡಿದು ಸರಿಪಡಿಸಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ಪ್ರಶ್ನೆಗಳಿಗೆ ಉತ್ತರಗಳನ್ನು ಬೇಗ ತರಿಸಿಕೊಡುವುದಕ್ಕೆ ಸಹಾಯಮಾಡಬೇಕು. ಆ ಕಡೆ, ಈ ಕಡೆ ಇರುವ ಸದಸ್ಯರ ಎಲ್ಲ ಹಕ್ಕು ಬಾಧ್ಯತೆಗಳ ರಕ್ಷಣೆಯೂ ತಮ್ಮ ಕೈಯಲ್ಲಿದ್ದು ಅವು ಸರಿಯಾಗಿ ಕಾಪಾಡಲ್ಪಡುತ್ತವೆ. ಇಷ್ಟು ಭರವಸೆಯನ್ನು ಕೊಟ್ಟರೆ ನಾವು ಅದನ್ನು ಒಪ್ಪಿಕೊಳ್ಳುತ್ತೇವೆಂದು ಹೇಳಿ ಕುಳಿತುಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಗೌಡ (ಚಳ್ಳಕೆರೆ).—ಸ್ವಾಮಿ, ನಾನು ಹೊಸದಾಗಿ ಏನೂ ಹೇಳಬೇಕಾಗಿಲ್ಲ. ಎಲ್ಲವನ್ನೂ ನನ್ನ ಸ್ನೇಹಿತರು ಈಗಾಗಲೇ ಹೇಳಿದ್ದಾರೆ. ಅನೇಕ ಪ್ರಶ್ನೆಗಳನ್ನು ಕಳಿಸಿದ್ದೇನೆ.

(ಶ್ರೀ ಬಿ. ಎಸ್. ಗೌ)

ಆವಕ್ಕೆ ಬೇಕಾದ ಉತ್ತರಗಳೆಲ್ಲ ಸೆಕ್ರೆಟೇರಿಯಟ್ಟಿನಲ್ಲೇ ಸಿಕ್ಕುತ್ತವೆ. ಬೇರೆ ಕಡೆಗೆ ಕಳಿಸಬೇಕಾಗಿಲ್ಲ. ಅದರೂ ಇನ್ನೂ ಉತ್ತರಗಳನ್ನು ಕೊಟ್ಟಿಲ್ಲ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

Sri S. SIVAPPA.—I request the Hon'ble Speaker to adjourn the House for at least two weeks to enable the Government to collect information and bring the questions and answers.

Mr. SPEAKER—For such a simple purpose does the Hon'ble Member want the adjournment of the House ?

Sri S. SIVAPPA.—I feel that we are really wasting our time. To-day, only four questions were discussed for one hour. I know, you are capable of disposing of twenty questions in an hour. We know, you were in a helpless position. If the Government are not in a position to supply the answers well in time. I request that this House be adjourned for two weeks.

Mr. SPEAKER.—The Hon'ble the Leader of the Opposition seem to know me better than myself. He says that I am in a better positions

ಶ್ರೀ ಗಂಗಾಧರ ನಾಮೋಷಿ (ಗುಲ್ಬರ್ಗ).— ಸ್ವಾಮಿ, ನಾನು ಕೆಲವು ಪ್ರಶ್ನೆಗಳನ್ನು ಕಳಿಸಿದ್ದೆ ಇಪತ್ತಿನವರೆಗೂ ಉತ್ತರಗಳು ಬಂದಿಲ್ಲ. ಸೆಕ್ರೆಟೇರಿಯಟ್ಟಿನಿಂದಲೇ ಉತ್ತರ ಕೊಡುವಂಥ ಪ್ರಶ್ನೆಗಳಾದರೂ ಉತ್ತರಗಳು ಬರುತ್ತಿಲ್ಲ. ಹೀಗಾದರೆ ನಮ್ಮ ಪ್ರಶ್ನೆಗಳೆಲ್ಲ ಲ್ಯಾಪ್ಸ್ ಆಗಿ ಹೋಗುತ್ತವೆ.

Chair's Statement re: No. of questions admitted, answered, etc.

Mr. SPEAKER.—Rule 40 is within the knowledge of every Member. I do not want to waste time by reading it. I would, however, eliminate the import of personal element because we are dealing with Members and not with individuals. I want to inform the House the position of Starred Questions:

Number of Questions admitted and sent to Government	...	1010
Number of questions for which replies are due as on 28th September 1963	...	943
Number of questions for which replies have been received	...	671
Number of questions which have been answered on the Floor of the House during Budget Session and Adjourned meetings	...	664

That is, out of 671 questions, 664 have answered.

Number of questions and answers List prepared and sent to Press	...	Nil
Number of Lists printed and ready	...	Nil
Number of replies on hand	...	7